SGF

9

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ನಗರ ಜಿಲ್ಲೆಯ ಆನೇಕಲ್‌ನ ಕಿತ್ತಗಾನಹಳ್ಳಿ ಬೀಜೋತ್ಪಾದನಾ ಕೇಂದ್ರದ 21.31 ಎಕರೆ ಜಮೀನನ್ನು ಕೆಪೆಕ್ ಸಂಸ್ಥೆಗೆ ಹಸ್ತಾಂತರಿಸುವ ಬಗ್ಗೆ.

**ಸರ್ಕಾರ ಆದೇಶ ಸಂಖ್ಯೆ: ಕೃಇ/11/ಕೃಇಕ/2013 ಬೆಂಗಳೂರು, ದಿನಾಂಕ:28-07-2014**

ಓದಲಾಗಿದೆ: 1. ವ್ಯವಸ್ಥಾಪಕ ನಿರ್ದೇಶಕರು ಕೆಪೆಕ್‌ರವರ ಪತ್ರ ಸಂ: ಕೆಪೆಕ್: 2012-2013/ 830, ದಿ: 15/02/2013.
2. ಆಯುಕ್ತರು, ಕೃಷಿ ಇಲಾಖೆರವರ ಪತ್ರ ಸಂಖ್ಯೆ: ಉಕೃನಿ/ಸ್ಥೇಫಾ/53/ 2012-13, ದಿ: 08-07-2013.

*******

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಪತ್ರದಲ್ಲಿ ದಿನಾಂಕ: 29-12-2012 ರಂದು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಸಂಸ್ಥೆಯ 69ನೇ ಆಡಳಿತ ಮಂಡಳಿಯ ಸಭೆಯಲ್ಲಿ ಪಶು ಆಹಾರ ಘಟಕ ಹಾಗೂ ಕೃಷಿಯ ಇತರೆ ಪೋಸ್ಟ್ ಹಾರ್ವೆಸ್ಟ್ ಸೌಲಭ್ಯಗಳ ಸ್ಥಾಪನೆಗೆ ಉಪಯೋಗಿಸಿಕೊಳ್ಳುವ ಬಗ್ಗೆ ಚರ್ಚಿಸಿ ಸದರಿ ಘಟಕ ಸ್ಥಾಪನೆಗಾಗಿ ಕೃಷಿ ಇಲಾಖೆಯ ಅಧೀನದಲ್ಲಿರುವ ಆನೇಕಲ್ ತಾಲ್ಲೂಕಿನ ಕಿತ್ತಗಾನಹಳ್ಳಿ ಸೀಡ್ ಫಾರಂನಲ್ಲಿರುವ 21 ಎಕರೆ ಭೂಮಿಯನ್ನು ಕೆಪೆಕ್ ಸಂಸ್ಥೆಗೆ ತೆಗೆದುಕೊಳ್ಳುವಂತೆ ತೀರ್ಮಾನಿಸಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು ತಿಳಿಸಿರುತ್ತಾರೆ. ಅಲ್ಲದೆ ಕೆಪೆಕ್ ಸಂಸ್ಥೆ ಈಗ ಒಂದು 300 ಟನ್ ಸಾಮರ್ಥ್ಯದ ಪಶು ಆಹಾರದ ಘಟಕವನ್ನು ಪ್ರಾರಂಭಿಸಲು ಉದ್ದೇಶಿಸಿದ್ದು ಹಾಗೂ ಕೃಷಿಯ ಪೋಸ್ಟ್ ಹಾರ್ವೆಸ್ಟ್ ಸೌಲಭ್ಯಗಳ ಸ್ಥಾಪನೆಗೆ ಕೆಲವು ಯೋಜನೆಗಳು ಪರಿಶೀಲನೆಯಲ್ಲಿರುವುದರಿಂದ ಸದರಿ ಸ್ಥಳವನ್ನು ಕೆಪೆಕ್ ಸಂಸ್ಥೆಗೆ ವರ್ಗಾವಣೆ ಮಾಡಿಕೊಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ರವರು ಕೋರಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, (ಕೆಪೆಕ್) ರವರ ಕೋರಿಕೆಗೆ ಕೃಷಿ ಆಯುಕ್ತರ ಅಭಿಪ್ರಾಯ ಕೋರಿದ್ದು ಅವರು ಮೇಲೆ ಓದಲಾದ (2)ರ ಪತ್ರದಲ್ಲಿ ಆನೇಕಲ್ ತಾಲ್ಲೂಕು ವ್ಯಾಪ್ತಿಯ ಕಿತ್ತಗಾನಹಳ್ಳಿ ಬೀಜೋತ್ಪಾದನಾ ಕೇಂದ್ರದ 21.31 ಎಕರೆ ಜಮೀನನ್ನು ಕೃಷಿ ತರಬೇತಿಯ ಉದ್ದೇಶಕ್ಕಾಗಿ ದಾನದ ಮೂಲಕ ಇಲಾಖೆಗೆ ಬಂದಿದ್ದು, ಸದರಿ ಜಮೀನಿನಲ್ಲಿ ಈ ಹಿಂದೆ ಬೀಜೋತ್ಪಾದನಾ ಚಟುವಟಿಕೆಗಳು ನಡೆಯುತ್ತಿತ್ತಾದರೂ, ತರುವಾಯ ಇಲಾಖೆಯ ನಿರ್ದೇಶಾನುಸಾರ ಜೈವಿಕ ಇಂಧನ ಸಸಿಗಳನ್ನು ಬೆಳೆಸಲಾಗಿದೆ. ಸದರಿ ಜಮೀನಿನ ಸುತ್ತ ವಾಣಿಜ್ಯ ಕಟ್ಟಡಗಳು ನಿರ್ಮಾಣಗೊಳ್ಳುತ್ತಿದ್ದು ಹಾಗೂ ಜಮೀನು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವುದರಿಂದ ಭೂಮಿಯ ಬೆಲೆ ಬಹಳ ಹೆಚ್ಚಾಗಿರುತ್ತದೆ. ಜಮೀನಿನ ಸುತ್ತಲೂ ಭದ್ರವಾದ ಆವರಣ ಗೋಡೆ ಇಲ್ಲದಿರುವುದರಿಂದ ಅತಿಕ್ರಮಣದ ಸಾಧ್ಯತೆಗಳಿರುತ್ತವೆ. ಕಿತ್ತಗಾನಹಳ್ಳಿ ಬೀಜೋತ್ಪಾದನಾ ಕೇಂದ್ರದಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ಹಾಗೂ ಜೈವಿಕ ಇಂಧನ ಸಸಿಗಳು ಮರಗಳಾಗಿರುವುದರಿಂದ ಪ್ರಸ್ತುತ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿಲ್ಲ. ಸದರಿ ಜಮೀನಿನಲ್ಲಿ ವಿಶಾಲವಾದ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ಸೂಕ್ತವಾದ ಎರಡು ದೊಡ್ಡ ಕಟ್ಟಡಗಳನ್ನು ಉತ್ಪಾದನೆಯ ಮತ್ತು ಶೇಖರಣೆಯ ಉದ್ದೇಶಕ್ಕೆ ಬಳಸಬಹುದು. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ KAPPEC ಸಂಸ್ಥೆಗೆ ಕಿತ್ತಗಾನಹಳ್ಳಿ ಬೀಜೋತ್ಪಾದನಾ ಕೇಂದ್ರದ 21.31 ಎಕರೆ ಜಮೀನನ್ನು ವಹಿಸಿಕೊಟ್ಟಲ್ಲಿ ಸರ್ಕಾರದ ಅತೀ ಅಮೂಲ್ಯವಾದ ಜಮೀನನ್ನು ಅತಿಕ್ರಮಣವಾಗದಂತೆ ತಡೆಯುವ ಮೂಲಕ ಸುರಕ್ಷಿತವಾಗಿ ಇಲಾಖೆಯಲ್ಲಿಯೇ ಉಳಿಸಿಕೊಳ್ಳಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ಬೆಂಗಳೂರು ನಗರ ಜಿಲ್ಲೆ ಅವರು ತಿಳಿಸಿರುವುದರಿಂದ, ಕಿತ್ತಗಾನಹಳ್ಳಿ ಬೀಜೋತ್ಪಾದನಾ ಕೇಂದ್ರದ 21.31 ಎಕರೆ ಜಮೀನನ್ನು ಕರ್ನಾಟಕ

..2

ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣಾ ಹಾಗೂ ರಫ್ತು ನಿಗಮಕ್ಕೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಹಸ್ತಾಂತರಿಸಬಹುದಾಗಿದೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

1. ಕೃಷಿ ಇಲಾಖೆಯ ಕಿತ್ತಗಾನಹಳ್ಳಿ ಬೀಜೋತ್ಪಾದನಾ ಕೇಂದ್ರದ ಜಮೀನು ಮತ್ತು ಕಟ್ಟಡಗಳನ್ನು ಪಶು ಆಹಾರದ ಘಟಕವನ್ನು ಹಾಗೂ ಕೃಷಿಯ ಪೋಸ್ಟ್ ಹಾರ್ವೆಸ್ಟ್ ಸೌಲಭ್ಯಗಳ ಸ್ಥಾಪನೆಗೆ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳುವುದು. ಜಮೀನಿನ ಮಾಲೀಕತ್ವವನ್ನು ಕೃಷಿ ಇಲಾಖೆಯಲ್ಲಿಯೇ ಮುಂದುವರಿಸುವುದು.

2. ಕೇಂದ್ರದಲ್ಲಿರುವ ಸ್ಥಿರಾಸ್ತಿಗಳನ್ನು ಮಾತ್ರ ಕೆಪೆಕ್ ಸಂಸ್ಥೆ ಇವರಿಗೆ ಹಸ್ತಾಂತರಿಸಲಾಗಿದೆ. ಆದರೆ ಲಭ್ಯವಿರುವ ಎಲ್ಲಾ ಚರಾಸ್ತಿಗಳನ್ನು ಕೃಷಿ ಇಲಾಖೆಯ ಸುಪರ್ದಿನಲ್ಲಿಯೇ ಇರುತ್ತದೆ.

3. ಜಮೀನಿನ ಯಾವುದೇ ಭಾಗವನ್ನು (ಬೇರೊಬ್ಬರಿಗೆ) ಗುತ್ತಿಗೆ ಆಧಾರದ ಮೇಲಾಗಲೀ ಅಥವಾ ಮಾರಾಟವನ್ನು ಮಾಡಬಾರದು.

4. ಕೆಪೆಕ್ ಸಂಸ್ಥೆಯವರು ಪಶು ಆಹಾರದ ಘಟಕವನ್ನು ಹಾಗೂ ಕೃಷಿಯ ಪೋಸ್ಟ್ ಹಾರ್ವೆಸ್ಟ್ ಸೌಲಭ್ಯಗಳನ್ನು ಸ್ಥಾಪಿಸುವ ಸಲುವಾಗಿ ಅಭಿವೃದ್ಧಿಗಾಗಿ ತಗಲುವ ವೆಚ್ಚವನ್ನು ಅವರೇ ಭರಿಸತಕ್ಕದ್ದು. ಈ ಬಗ್ಗೆ ಕೃಷಿ ಇಲಾಖೆಯು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.

5. ಒಂದು ವೇಳೆ ಕೆಪೆಕ್ ಸಂಸ್ಥೆಯವರು ಕೃಷಿ ಕ್ಷೇತ್ರದ ಜಮೀನನ್ನು ಹಿಂದಕ್ಕೆ ಕೃಷಿ ಇಲಾಖೆಗೆ ವಾಪಸ್ಸು ನೀಡಬೇಕಾದ ಸನ್ನಿವೇಶ ಒದಗಿದ್ದಲ್ಲಿ ತಮ್ಮ ಅವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯ ಮತ್ತು ಕಟ್ಟಡದ ಮೌಲ್ಯ ಇತ್ಯಾದಿಗಳನ್ನು ಕೃಷಿ ಇಲಾಖೆಯು ಕೆಪೆಕ್ ಸಂಸ್ಥೆಯವರಿಗೆ ವಾಪಸ್ಸು ನೀಡುವುದಿಲ್ಲ.

ಕೃಷಿ ಆಯುಕ್ತರ ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಕಿತ್ತಗಾನಹಳ್ಳಿ ಬೀಜೋತ್ಪಾದನಾ ಕೇಂದ್ರದ 21.31 ಎಕರೆ ಜಮೀನನ್ನು 300 ಟನ್ ಸಾಮರ್ಥ್ಯದ "ಪಶು ಆಹಾರ ಘಟಕವನ್ನು ಹಾಗೂ ಕೃಷಿಯ ಪೋಸ್ಟ್ ಹಾರ್ವೆಸ್ಟ್ ಸೌಲಭ್ಯಗಳ ಸ್ಥಾಪನೆಗೆ" ಉಪಯೋಗಿಸಿಕೊಳ್ಳುವ ಸಲುವಾಗಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತಕ್ಕೆ (KAPPEC) ಇವರಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಹಸ್ತಾಂತರಿಸಲು ಸರ್ಕಾರವು ಅನುಮೋದನೆ ನೀಡಿರುತ್ತದೆ.

1. ಕೃಷಿ ಇಲಾಖೆಯ ಕಿತ್ತಗಾನಹಳ್ಳಿ ಬೀಜೋತ್ಪಾದನಾ ಕೇಂದ್ರದ ಜಮೀನು ಮತ್ತು ಕಟ್ಟಡಗಳನ್ನು ಪಶು ಆಹಾರದ ಘಟಕವನ್ನು ಹಾಗೂ ಕೃಷಿಯ ಪೋಸ್ಟ್ ಹಾರ್ವೆಸ್ಟ್ ಸೌಲಭ್ಯಗಳ ಸ್ಥಾಪನೆಗೆ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳುವುದು. ಜಮೀನಿನ ಮಾಲೀಕತ್ವವನ್ನು ಕೃಷಿ ಇಲಾಖೆಯಲ್ಲಿಯೇ ಮುಂದುವರಿಸುವುದು.

2. ಕೇಂದ್ರದಲ್ಲಿರುವ ಸ್ಥಿರಾಸ್ತಿಗಳನ್ನು ಮಾತ್ರ ಕೆಪೆಕ್ ಸಂಸ್ಥೆ ಇವರಿಗೆ ಹಸ್ತಾಂತರಿಸಲಾಗಿದೆ. ಆದರೆ ಲಭ್ಯವಿರುವ ಎಲ್ಲಾ ಚರಾಸ್ತಿಗಳನ್ನು ಕೃಷಿ ಇಲಾಖೆಯ ಸುಪರ್ದಿನಲ್ಲಿಯೇ ಇರುತ್ತದೆ.

3

3. ಜಮೀನಿನ ಯಾವುದೇ ಭಾಗವನ್ನು (ಬೇರೊಬ್ಬರಿಗೆ) ಗುತ್ತಿಗೆ ಆಧಾರದ ಮೇಲಾಗಲೀ ಅಥವಾ ಮಾರಾಟವನ್ನು ಮಾಡಬಾರದು.

4. ಕೆಪೆಕ್ ಸಂಸ್ಥೆಯವರು ಪಶು ಆಹಾರದ ಘಟಕವನ್ನು ಹಾಗೂ ಕೃಷಿಯ ಪೋಸ್ಟ್ ಹಾರ್ವೆಸ್ಟ್ ಸೌಲಭ್ಯಗಳನ್ನು ಸ್ಥಾಪಿಸುವ ಸಲುವಾಗಿ ಅಭಿವೃದ್ಧಿಗಾಗಿ ತಗಲುವ ವೆಚ್ಚವನ್ನು ಅವರೇ ಭರಿಸತಕ್ಕದ್ದು. ಈ ಬಗ್ಗೆ ಕೃಷಿ ಇಲಾಖೆಯು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.

5. ಒಂದು ವೇಳೆ ಕೆಪೆಕ್ ಸಂಸ್ಥೆಯವರು ಕೃಷಿ ಕ್ಷೇತ್ರದ ಜಮೀನನ್ನು ಹಿಂದಕ್ಕೆ ಕೃಷಿ ಇಲಾಖೆಗೆ ವಾಪಸ್ಸು ನೀಡಬೇಕಾದ ಸನ್ನಿವೇಶ ಒದಗಿದ್ದಲ್ಲಿ ತಮ್ಮ ಅವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯ ಮತ್ತು ಕಟ್ಟಡದ ಮೌಲ್ಯ ಇತ್ಯಾದಿಗಳನ್ನು ಕೃಷಿ ಇಲಾಖೆಯು ಕೆಪೆಕ್ ಸಂಸ್ಥೆಯವರಿಗೆ ವಾಪಾಸ್ಸು ನೀಡುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
(ಜ್ಯೋತಿ ಆರ್.ಜೆ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಕೃಷಿ ಇಲಾಖೆ (ಯೋಜನೆ)
28/7/14

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ) ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ) ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು, (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು-01.
4. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ (KAPPEC) ನಂ. 17, ರಿಚ್‌ಮಂಡ್ ರಸ್ತೆ, ಬೆಂಗಳೂರು.
6. ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.(ಕೃಷಿ ನಿರ್ದೇಶಕರ ಮೂಲಕ)
7. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

<u>ಮಾಹಿತಿಗಾಗಿ ಪ್ರತಿಯನ್ನು:</u>

1. ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ-1 ರವರ ಆಪ್ತ ಸಹಾಯಕರು ಕೃಷಿ ಇಲಾಖೆ, ಬೆಂಗಳೂರು.